# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೊಪ್ಪಳ ಜಿಲ್ಲಾ ಹಾಗೂ ತಾಲ್ಲೂಕು ಬಸಾಪುರ ಗ್ರಾಮದಲ್ಲಿ ಕಬ್ಬಿಣದ ಅದಿರು ಸಂಸ್ಕರಣಾ ಘಟಕ (ಪೆಲ್ಲಟ್ ಪ್ಲಾಂಟ್) ಹಾಗೂ ಸಮಗ್ರ ಉಕ್ಕು ಉತ್ಪಾದನಾ ಕಾರ್ಖಾನೆಯನ್ನು ಸ್ಥಾಪಿಸಲು ಮ.ಎಂ.ಎಸ್.ಪಿ.ಎಲ್ ಲಿಮಿಟೆಡ್ ರವರಿಗೆ ನೀಡಲಾದ ಅನುಮತಿಯನ್ನು ಪರಿಷ್ಕರಿಸಿ ವಿಂಗಡಿಸಿದ ಆದೇಶ ಹೊರಡಿಸುವ ಕುರಿತು.

ಓದಲಾಗಿದೆ:- (1) ಸರ್ಕಾರಿ ಆದೇಶ ಸಂಖ್ಯೆ: ಸಿಐ 511 ಎಸ್‌ಪಿಐ 2005 ದಿನಾಂಕ 22.12.2005.

(2) ಮ:ಎಂಎಸ್‌ಪಿಎಲ್ ಲಿಮಿಟೆಡ್ ಇವರ ಕಾರ್ಯಕಾರಿ ನಿರ್ದೇಶಕರ ದಿನಾಂಕ 18.1.2006ರ ಮನವಿ.

(3) ಮ:ಆರೆಸ್ ಐರನ್ ಮತ್ತು ಸ್ಟೀಲ್ ಲಿಮಿಟೆಡ್, ಹೊಸಪೇಟೆ ರವರ ಪತ್ರ ದಿನಾಂಕ 9-1-2006

-:0:-

ಪ್ರಸ್ತಾವನೆ:-

ಮೇಲೆ ಕ್ರಮಾಂಕ (1)ರಲ್ಲಿ ಓದಲಾಗಿರುವ ಸರ್ಕಾರಿ ಆದೇಶದಲ್ಲಿ "ಮ:ಎಂಎಸ್‌ಪಿಎಲ್ ಲಿಮಿಟೆಡ್" ಎನ್.ಸಿ.ಕಾಲೋನಿ ಹೊಸಪೇಟೆ, ಬಳ್ಳಾರಿ ಜಿಲ್ಲೆ, ಇವರಿಗೆ ಕೊಪ್ಪಳ ಜಿಲ್ಲಾ ಹಾಗೂ ತಾಲ್ಲೂಕು ಬಸಾಪುರ ಗ್ರಾಮದ ವ್ಯಾಪ್ತಿಯಲ್ಲಿ ವಾರ್ಷಿಕ 1.20 ದಶಲಕ್ಷ ಟನ್ ಸಾಮರ್ಥ್ಯದ ಕಬ್ಬಿಣದ ಅದಿರು ಸಂಸ್ಕರಣ (ಪೆಲ್ಲಟ್ ಪ್ಲಾಂಟ್) ಹಾಗೂ ವಾರ್ಷಿಕ 1.00 ದಶಲಕ್ಷ ಟನ್ ಸಾಮರ್ಥ್ಯದ ವಿಶೇಷ ಉಕ್ಕು ಉತ್ಪಾದನೆಗೆ ಸಮಗ್ರ ಉಕ್ಕು ಕಾರ್ಖಾನೆಯನ್ನು ಒಟ್ಟು ರೂ.2292.26 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಅನುಮೋದನೆ ನೀಡಲಾಗಿತ್ತು.

ಮೇಲೆ ಕ್ರಮಾಂಕ (2)ರಲ್ಲಿ ಓದಲಾಗಿರುವ ದಿನಾಂಕ 18.1.2006ರ ಪತ್ರದಲ್ಲಿ ಮ:ಎಂಎಸ್‌ಪಿಎಲ್ ಲಿಮಿಟೆಡ್. ಎನ್.ಸಿ.ಕಾಲೋನಿ ಹೊಸಪೇಟೆ, ಬಳ್ಳಾರಿ ಜಿಲ್ಲೆಯ ಕಾರ್ಯಕಾರಿ ನಿರ್ದೇಶಕರು ಪೆಲ್ಲಟ್ ಪ್ಲಾಂಟ್ ಪ್ರಾಜೆಕ್ಟ್‌ನ್ನು ತಮ್ಮ ಸಂಸ್ಥೆ ಅಂದರೆ ಮ:ಎಂಎಸ್‌ಪಿಎಲ್ ಲಿಮಿಟೆಡ್ ಕಂಪನಿಯ ಹೆಸರಿನಲ್ಲಿಯೇ ಕಾರ್ಯಗತಗೊಳಿಸಲಾಗುವುದು ಆದರೆ ಕಾರಣಾಂತರಗಳಿಂದ ಉದ್ದೇಶಿತ ಸ್ಪೆಷಲಾಟ ಇಂಟಿಗ್ರೇಟೆಡ್ ಐರನ್ ಅಂಡ್ ಸ್ಟೀಲ್ ಪ್ಲಾಂಟ್‌ಗಳನ್ನು ಇದೇ ಪ್ರವರ್ತಕರ ನೂತನ ಕಂಪನಿ ಮ:ಆರೆಸ್ ಐರನ್ ಅಂಡ್ ಸ್ಟೀಲ್ ಲಿಮಿಟೆಡ್ (AARESS IRON AND STEEL LIMITED) ನ ಮುಖಾಂತರ ಕಾರ್ಯಗತ ಗೊಳಿಸಲು ಉದ್ದೇಶಿಸಿದೆಯೆಂದು ತಿಳಿಸಿದ್ದಾರೆ ಹಾಗೂ ಈಗಾಗಲೇ ದಿನಾಂಕ 22-12-2005 ರಂದು ಹೊರಡಿಸಲಾದ ಸರ್ಕಾರಿ ಆದೇಶದಲ್ಲಿ ಮಂಜೂರು ಮಾಡಲ್ಪಟ್ಟ

ಮೂಲಭೂತ ಸೌಕರ್ಯಗಳು ಹಾಗೂ ರಿಯಾಯಿತಿಗಳನ್ನು ಈ ಎರಡು ಕಂಪನಿಗಳ ಮಧ್ಯೆ ವಿಂಗಡಿಸಿ ಮರುಹಂಚಿಕೆ ಮಾಡಿ ಪರಿಷ್ಕೃತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಈ ಎರಡು ಘಟಕಗಳ ಪರಿಷ್ಕೃತ ಯೋಜನೆಯ ಅಂಶಗಳು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ಯೋಜನೆಯ ಅಂಶಗಳು | ಮೆ.ಎಂ.ಎಸ್.ಪಿ. ಎಲ್ ಲಿಮಿಟೆಡ್ | ಮೆ.ಆರೆಸ್ ಐರನ್ ಅಂಡ್ ಸ್ಟೀಲ್ ಲಿಮಿಟೆಡ್ | ಒಟ್ಟು |
|---|---|---|---|---|
| 1 | ಉದ್ದೇಶಿತ ಉತ್ಪಾದನೆ | ಕಬ್ಬಿಣದ ಅದಿರು ಸಂಸ್ಕರಣಾ ಘಟಕ [ಪೆಲ್ಲೆಟ್ ಪ್ಲಾಂಟ್] | ಇಂಟಗ್ರೇಟೆಡ್ ಐರನ್ ಅಂಡ್ ಸ್ಟೀಲ್ ಯೋಜನೆ | |
| 2 | ವಾರ್ಷಿಕ ಉತ್ಪಾದನಾ ಸಾಮರ್ಥ್ಯ [ದಶಲಕ್ಷ ಟನ್ ಗಳಲ್ಲಿ] | 1.20 | 1.00 | 2.20 |
| 3 | ಹೂಡಲಿರುವ ಬಂಡವಾಳ ರೂ. ಕೋಟಿಗಳಲ್ಲಿ | 200 | 2092.26 | 2292.26 |
| 4 | ಜಮೀನು [ಹೆಕ್ಟೇರ್ ಗಳಲ್ಲಿ] | 48.335 | 370.125 | 418.46 |
| 5 | ನೀರಿನ ಅಗತ್ಯ (MGD) | 2.55 | 10 | 12.55 |
| 6 | ವಿದ್ಯುತ್ ಬೇಡಿಕೆ [MW] | 10 | 10 | 20 |
| 7 | ಒದಗಿಸಲಿರುವ ಉದ್ಯೋಗಾವಕಾಶ | 150 ಜನರು | 850 ಜನರು | 1000 ಜನರು |

ಸದರಿ ಮನವಿಯನ್ನು ಪರಿಗಣಿಸಿ ಸರ್ಕಾರವು ಈ ಕೆಳಕಂಡ ಪರಿಷ್ಕೃತ ಆದೇಶವನ್ನು ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಸಿಐ 511 ಎಸ್‌ಪಿಐ 2005**
**ಬೆಂಗಳೂರು ದಿನಾಂಕ 22-3-2006**

ಮೆ:ಎಂ.ಎಸ್.ಪಿ.ಎಲ್ ಲಿಮಿಟೆಡ್ ಮತ್ತು ಮೆ:ಆರೆಸ್ ಐರನ್ ಮತ್ತು ಸ್ಟೀಲ್ ಲಿಮಿಟೆಡ್ ರವರ ಮನವಿಯನ್ನು ಪರಿಗಣಿಸಿ ಈಗಾಗಲೇ ಮಂಜೂರು ಮಾಡಲಾದ ಕಬ್ಬಿಣದ ಅದಿರು ಸಂಸ್ಕರಣಾ ಹಾಗೂ ಸಮಗ್ರ ಉಕ್ಕು ಕಾರ್ಖಾನೆ ಯೋಜನೆಯನ್ನು ಈ ಕೆಳಕಂಡಂತೆ ವಿಂಗಡಿಸಿ ಕಾರ್ಯಗತಗೊಳಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ. ಸಂಬಂಧಪಟ್ಟ ಮೂಲಭೂತ ಸೌಕರ್ಯ ಸಂಸ್ಥೆಗಳು ಕ್ರಮಾನುಸರ ಸೂಚಿಸಿದ ಪ್ರಮಾಣದಲ್ಲಿ ಮೂಲಸೌಕರ್ಯಗಳನ್ನು ಒದಗಿಸತಕ್ಕದ್ದು.

| ಕ್ರ. ಸಂ. | ಯೋಜನೆಯ ಅಂಶಗಳು | ಮೆ.ಎಂ.ಎಸ್.ಪಿ. ಎಲ್ ಲಿಮಿಟೆಡ್ | ಆರೆಸ್ ಐರನ್ ಅಂಡ್ ಸ್ಟೀಲ್ ಲಿಮಿಟೆಡ್ | ಒಟ್ಟು |
|---|---|---|---|---|
| 1 | ಉದ್ದೇಶಿತ ಉತ್ಪಾದನೆ | ಕಬ್ಬಿಣದ ಅದಿರು ಸಂಸ್ಕರಣಾ ಘಟಕ [ಪೆಲ್ಲೆಟ್ ಪ್ಲಾಂಟ್] | ಇಂಟಗ್ರೇಟೆಡ್ ಐರನ್ ಅಂಡ್ ಸ್ಟೀಲ್ ಯೋಜನೆ | |
| 2 | ವಾರ್ಷಿಕ ಉತ್ಪಾದನಾ ಸಾಮರ್ಥ್ಯ [ದಶಲಕ್ಷ ಟನ್ ಗಳಲ್ಲಿ] | 1.20 | 1.00 | 2.20 |
| 3 | ಹೂಡಲಿರುವ ಬಂಡವಾಳ ರೂ. ಕೋಟಿಗಳಲ್ಲಿ | 200 | 2092.26 | 2292.26 |
| 4 | ಜಮೀನು [ಹೆಕ್ಟೇರ್ ಗಳಲ್ಲಿ] | 48.335 | 370.125 | 418.46 |
| 5 | ನೀರಿನ ಅಗತ್ಯ (MGD) | 2.55 | 10 | 12.55 |
| 6 | ವಿದ್ಯುತ್ ಬೇಡಿಕೆ [MW] | 10 | 10 | 20 |
| 7 | ಒದಗಿಸಲಿರುವ ಉದ್ಯೋಗಾವಕಾಶ | 150 ಜನರು | 850 ಜನರು | 1000 ಜನರು |

ದಿನಾಂಕ 22-12-2005ರ ಆದೇಶದಲ್ಲಿ ವಿಧಿಸಲಾದ ಉಳಿದ ಎಲ್ಲಾ ಷರತ್ತುಗಳು ಈ ಎರಡು ಕಂಪೆನಿಗಳಿಗೆ ಯಥಾವತ್ತಾಗಿ ಅನ್ವಯವಾಗುತ್ತವೆ.

ನೀರು ಪೂರೈಕೆ ವಿಷಯಕ್ಕೆ ಸಂಬಂಧಿಸಿದಂತೆ, ಜಲಸಂಪನ್ಮೂಲ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಜಸಂಇ:20:ಏಂಎಂಬಿ:2006 ದಿನಾಂಕ 18.2.2006ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಈ ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಹಾಗೂ
ಅವರ ಹೆಸರಿನಲ್ಲಿ,

22.3.06
(ಎಂ.ಶಿವಲಿಂಗಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

22/3

ಪ್ರತಿಗಳು:-

1) ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು.

2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ
5) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಮತ್ತು ಸಾರಿಗೆ ಇಲಾಖೆ
6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ
7) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ
8) ಸರ್ಕಾರದ ಕಾರ್ಯದರ್ಶಿಗಳು, ಜೈವಿಕ ಮತ್ತು ಪರಿಸರ ಇಲಾಖೆ
9) ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಅಯವ್ಯಯ ಮತ್ತು ಸಂಪನ್ಮೂಲ)
10) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ
11) ಸರ್ಕಾರದ ಅಧೀನ ಕಾರ್ಯದರ್ಶಿ (ವಾಣಿಜ್ಯ ತೆರಿಗೆ), ಆರ್ಥಿಕ ಇಲಾಖೆ
12) ಸರ್ಕಾರದ ಅಧೀನ ಕಾರ್ಯದರ್ಶಿ, (ವೆಚ್ಚಗಳು), ಆರ್ಥಿಕ ಇಲಾಖೆ,
13) ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕಾ ವಾಣಿಜ್ಯ ಇಲಾಖೆ, ಖನಿಜಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
14) ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಗಾಂಧಿನಗರ, ಬೆಂಗಳೂರು-9.
15) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮತ್ತು ಕಾರ್ಯಕಾರಿ ಸದಸ್ಯರು, ಕೆ.ಐ.ಎ.ಡಿ.ಬಿ., ನೃಪತುಂಗ ರಸ್ತೆ,ಬೆಂಗಳೂರು.
16) ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ
17) ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
18) ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ ಜಿಲ್ಲೆ, ಕೊಪ್ಪಳ
19) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಖನಿಜ ಭವನ, ರೇಸ್ ಕೋಸ್ ರಸ್ತೆ,ಬೆಂಗಳೂರು.
20) ಮ:ಎಂಎಸ್‌ಪಿಎಲ್ ಲಿಮಿಟೆಡ್. ಎನ್.ಸಿ.ಕಾಲೋನಿ ಹೊಸಪೇಟೆ, ಬಳ್ಳಾರಿ ಜಿಲ್ಲೆ, ಬಳ್ಳಾರಿ.
21) ಮ: ಆರಸ್ ಐರನ್ ಅಂಡ್ ಸ್ಟೀಲ್ ಲಿಮಿಟೆಡ್, 111, 15ನೇ ವಾರ್ಡ್, ನೆಹರು ಕೋ-ಆಪರೇಟಿವ್ ಕಾಲೋನಿ, ಹೊಸಪೇಟೆ-589 203
22) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

08394-2382-383

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೊಪ್ಪಳ ಜಿಲ್ಲೆಯಲ್ಲಿ ಮ:ಎಂಎಸ್‌ಪಿಎಲ್ ಲಿಮಿಟೆಡ್ ಇವರಿಂದ ಐರನ್ ಓರ್ ಪೆಲ್ಲೆಟ್ ಪ್ಲಾಂಟ್ ಮತ್ತು ಸಮಗ್ರ ಉಕ್ಕು ಕಾರ್ಖಾನೆ ಪ್ರಾರಂಭಿಸುವ ಕುರಿತು.

- - -

**ಪ್ರಸ್ತಾವನೆ:-**

ಮ: ಎಂಎಸ್‌ಪಿಎಲ್ ಲಿಮಿಟೆಡ್, ಎನ್‌ಸಿ ಕಾಲೋನಿ, ಹೊಸಪೇಟೆ, ಬಳ್ಳಾರಿ-583 203 ಕಂಪನಿಯು ಭಾರತೀಯ ಕಂಪನಿಗಳ ಅಧಿನಿಯಮ 1956ರ ಮೇರೆಗೆ ದಿನಾಂಕ 18.10.1961 ರಂದು ನೊಂದಾವಣೆಯಾಗಿದೆ. ಪ್ರಸ್ತುತ ಈ ಸಂಸ್ಥೆಯು ಗಣಿಗಾರಿಕೆ ಹಾಗೂ ಖನಿಜ ಮಾರುಕಟ್ಟೆ ವ್ಯವಹಾರ, ಇಂಡಸ್ಟ್ರಿಯಲ್ ಹಾಗೂ ಮೆಡಿಕಲ್ ಗ್ಯಾಸಸ್ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. 31.3.2004ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಈ ಸಂಸ್ಥೆಯ ಆದಾಯವು ರೂ.323.55 ಕೋಟಿಗಳಾಗಿವೆ. ಕಬ್ಬಿಣದ ಅದಿರನ್ನು ಆಧಾರಿಸಿ ಮೌಲ್ಯ ವರ್ಧಿಸಿದ ವಸ್ತುಗಳನ್ನು ಅಂದರೆ ಐರನ್ ಓರ್ ಪೆಲ್ಲೆಟ್, ಸ್ಪಾಂಜ್ ಐರನ್ ಹಾಗೂ ಉಕ್ಕು ತಯಾರಿಕೆಗೆ ಇರುವ ವಿಪುಲ ಅವಕಾಶಗಳನ್ನು ಮನಗಂಡ ಕಂಪನಿಯು ರೂ.2292.26 ಕೋಟಿ ಬಂಡವಾಳ ಹೂಡಿಕೆಯ ಈ ಕೆಳಕಂಡ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಿದೆ.

(a) 1.20 ಮಿಲಿಯನ್ ಟಿಪಿಎ ಐರನ್ ಓರ್ ಪೆಲ್ಲೆಟ್ ಪ್ಲಾಂಟ್

(b) 1 ಮಿಲಿಯನ್ ಟಿಪಿಎ ಸ್ಪೆಷಾಲಿಟಿ ಸ್ಟೀಲ್ ಪ್ಲಾಂಟ್ ಮತ್ತು ಇಂಟಿಗ್ರೇಟೆಡ್ ಸ್ಟೀಲ್ ಪ್ಲಾಂಟ್ ಯೋಜನೆ.

ಈ ಯೋಜನೆಯು ಅನುಷ್ಠಾನಗೊಂಡಾಗ ಸುಮಾರು 1000 ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿಯು ದಿನಾಂಕ 6.6.2005ರಂದು ನಡೆದ 4ನೇ ಸಭೆಯಲ್ಲಿ ಮ:ಎಂಎಸ್‌ಪಿಎಲ್ ಲಿಮಿಟೆಡ್, ಎನ್.ಸಿ.ಕಾಲೋನಿ, ಹೊಸಪೇಟೆ, ಬಳ್ಳಾರಿ ಜಿಲ್ಲೆ ಇವರು ಸಲ್ಲಿಸಿದ ಯೋಜನಾ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುಮೋದನೆ ನೀಡಿರುತ್ತದೆ ಹಾಗೂ ಮೂಲಭೂತ ಸೌಲಭ್ಯ ಹಾಗೂ ರಿಯಾಯಿತಿಗಳನ್ನು ನೀಡಲು ಶಿಫಾರಸ್ಸನ್ನು ಮಾಡಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

## ಸರ್ಕಾರಿ ಆದೇಶ ಸಂಖ್ಯೆ:ಸಿಐ 511 ಎಸ್‌ಪಿಐ 2005
## ಬೆಂಗಳೂರು ದಿನಾಂಕ 22-12-2005

ಕೊಪ್ಪಳ ಜಿಲ್ಲಾ ಹಾಗೂ ತಾಲ್ಲೂಕು, ಬಸಾಪುರ ಗ್ರಾಮದ ವ್ಯಾಪ್ತಿಯಲ್ಲಿ ವಾರ್ಷಿಕ 1.20 ದಶಲಕ್ಷ ಟನ್ ಸಾಮರ್ಥ್ಯದ ಕಬ್ಬಿಣದ ಅದಿರು ಸಂಸ್ಕರಣಾ (ಪೆಲ್ಲೆಟ್ ಪ್ಲಾಂಟ್) ಹಾಗೂ ವಾರ್ಷಿಕ ಒಂದು ದಶಲಕ್ಷ ಟನ್ ಸಾಮರ್ಥ್ಯದ ವಿಶೇಷ ಉಕ್ಕು ಉತ್ಪಾದನೆಗೆ ಸಮಗ್ರ ಉಕ್ಕು ಕಾರ್ಖಾನೆಯನ್ನು ರೂ.2292.26 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಮೆ.ಎಂ.ಎಸ್.ಪಿ.ಎಲ್

ಲಿಮಿಟೆಡ್ ರವರಿಗೆ ಈ ಮೂಲಕ ಸರ್ಕಾರದ ಅನುಮೋದನೆ ನೀಡಲಾಗಿದೆ ಹಾಗೂ ಈ ಕೆಳಕಂಡ ಮೂಲಭೂತ ಸೌಕರ್ಯ ಹಾಗೂ ರಿಯಾಯಿತಿಗಳನ್ನು ಮಂಜೂರು ಮಾಡಿದೆ.

ಮೂಲಭೂತ ಸೌಲಭ್ಯಗಳು:-

ಜಮೀನು:- ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು 1034 ಎಕರೆ ಭೂಮಿಯನ್ನು ಹಾಲವರ್ತಿ ಗ್ರಾಮದ ಸರ್ವೆ ನಂ.2 ರಿಂದ 9, 12 ರಿಂದ 18, 20, 21, 132, 136ರಲ್ಲಿ ಹಾಗೂ ಕೊಪ್ಪಳ ಗ್ರಾಮದ ಸರ್ವೆ ನಂ. 295 ರಿಂದ 299, 300 ರಿಂದ 305, 307 ರಿಂದ 309ರಲ್ಲಿ ಹಾಗೂ ಬಸಾಪುರ ಗ್ರಾಮದ ಸರ್ವೆ ನಂ. 80, 81, 121, 122, 127 ರಿಂದ 130, 132 ರಿಂದ 154 ಮತ್ತು 157 ರಿಂದ 171ರಲ್ಲಿ ಜಮೀನು ಮಾಲೀಕರ ಸಹಮತಿಯೊಂದಿಗೆ ಭೂ ಸ್ವಾಧೀನಗೊಳಿಸಿ ಘಟಕಕ್ಕೆ ಹಂಚಿಕೆ ಮಾಡತಕ್ಕದ್ದು. ಕಾರ್ಖಾನೆಗೆ ಜಮೀನಿನ ಅಗತ್ಯವನ್ನು ಭೂ ಅಗತ್ಯಗಳ ಪರಿಶೋಧನಾ ಸಮಿತಿ (Land Audit Committee) ಯಿಂದ ಪರಿಶೀಲಿಸಿ ನಿಗದಿಪಡಿಸತಕ್ಕದ್ದು.

ವಿದ್ಯುತ್:- ಕೆಪಿಟಿಸಿಎಲ್/ಜೆಸ್ಕಾಮ್ ಸಂಸ್ಥೆಯು ಕಾರ್ಖಾನೆ ನಿರ್ಮಾಣ ಸಂದರ್ಭದಲ್ಲಿ ಅಗತ್ಯ ವಿದ್ಯುಚ್ಛಕ್ತಿ ನೆರವು ಹಾಗೂ ಯೋಜನೆಯನ್ನು ಅನುಷ್ಠಾನದ ನಂತರ ಅಗತ್ಯವಿರುವ 20 ಎಂಡಬ್ಲ್ಯು 'ಗ್ರಿಡ್ ಸಪೋರ್ಟ್' ಅನ್ನು ಮುನಿರಾಬಾದ್ ವಿದ್ಯುಚ್ಛಕ್ತಿ ಸರಬರಾಜು ಉಪಕೇಂದ್ರದಿಂದ ಸರಬರಾಜು ಮಾಡುವುದು.

ನೀರು:- ಈ ಕೆಳಕಂಡ ಷರತ್ತುಗಳಿಗೊಳಪಟ್ಟು ತುಂಗಭದ್ರಾ ಜಲಾಶಯದಿಂದ 12.55 ಎಂಜಿಡಿ ನೀರನ್ನು ಎತ್ತಲು ಅನುಮೋದನೆ ನೀಡಲಾಗಿದೆ.

(i) ತುಂಗಭದ್ರಾ ಜಲಾಶಯದ ನೀರಿನ ಪ್ರಮಾಣದ ಲೆಕ್ಕಾಚಾರವನ್ನು ತುಂಗಭದ್ರಾ ಮಂಡಳಿಯು ನಿರ್ವಹಿಸುತ್ತಿರುವುದರಿಂದ ಈಗಾಗಲೇ ಮೆ.ಕಲ್ಯಾಣಿ ಸ್ಟೀಲ್ಸ್ ಲಿಮಿಟೆಡ್ ಮತ್ತು ಮೆ.ಕಿರ್ಲೋಸ್ಕರ್ ಫೆರಸ್ ಇಂಡಸ್ಟ್ರೀಸ್ ಲಿಮಿಟೆಡ್ ಉದ್ಯಮಿಗಳಿಗೆ ತುಂಗಭದ್ರಾ ಜಲಾಶಯದಿಂದ ನೀರೆತ್ತಲು ವಿಧಿಸಿರುವ ನಿಬಂಧನೆಗಳಿಗೆ ಒಳಪಟ್ಟ ಮೆ.ಎಂ.ಎಸ್.ಪಿ.ಎಲ್ ಲಿಮಿಟೆಡ್ ಸಂಸ್ಥೆಯೂ ಸಹ 12.55 ಎಂಜಿಡಿ ಪ್ರಮಾಣದ ನೀರನ್ನು ಜಲಾಶಯದಿಂದ ಉಪಯೋಗಿಸಿಕೊಳ್ಳುವುದು.

(ii) ಸದರಿ ಸಂಸ್ಥೆಯು ಸ್ಥಾಪಿಸಲು ಉದ್ದೇಶಿಸಿರುವ ಉದ್ಯಮದ ಜಾಗ ಹಾಗೂ ಜಲಾಶಯದಿಂದ ನೀರೆತ್ತಲು ಮಾಡಿಕೊಳ್ಳಲಾಗುವ ವ್ಯವಸ್ಥೆಯ ಬಗ್ಗೆ ಹಾಗೂ ಜಲಾಶಯದ ರಕ್ಷಣಾ ವ್ಯವಸ್ಥೆಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿ ಹಾಗೂ ನಕಾಶೆಗಳನ್ನು ಜಲ ಸಂಪನ್ಮೂಲ ಇಲಾಖೆಯ ಮುಖಾಂತರ ತುಂಗಭದ್ರಾ ಮಂಡಳಿಗೆ ಒದಗಿಸಿ ಮಂಡಳಿಯ ಅನುಮೋದನೆಯನ್ನು ಪಡೆಯತಕ್ಕದ್ದು.

(iii) ಮೆ.ಎಂ.ಎಸ್.ಪಿ.ಎಲ್ ಲಿಮಿಟೆಡ್ ಸಂಸ್ಥೆಯು ಸೂಕ್ತ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಜಲ ಸಂಪನ್ಮೂಲ ಇಲಾಖೆಯ ಮುಖಾಂತರ ತುಂಗಭದ್ರಾ ಮಂಡಳಿಗೆ ಸಲ್ಲಿಸಿ ಒಪ್ಪಿಗೆಯನ್ನು ಪಡೆದುಕೊಳ್ಳುವುದು.

ಅಲ್ಲದೆ ಕಂಪೆನಿಯು ರಾಷ್ಟ್ರೀಯ ಜಲನೀತಿ ಹಾಗೂ ಮಳೆ ನೀರು ಸಂರಕ್ಷಣೆ ಪದ್ಧತಿಯನ್ನು ಅಳವಡಿಸಿಕೊಳ್ಳಲು, ಅಂತರ್ಜಲ ಪುನಶ್ಚೇತನ ಹಾಗೂ ಬಳಸಿದ ನೀರಿನ

ಶುದ್ಧೀಕರಣಗೊಳಿಸುವುದು. ಅಲ್ಲದೇ ಕಂಪನಿಗೆ ಎಷ್ಟು ಪ್ರಮಾಣದ ನೀರಿನ ಅವಶ್ಯಕತೆ ಇದೆ ಎಂಬುದನ್ನು ಬಳಸಿದ ನೀರಿನ ಶುದ್ಧೀಕರಣದ ನೀರಿನ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ತಿಳಿಸಲು ಸೂಚಿಸಲಾಗಿದೆ.

***ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಅನುಮತಿ:-***

ಈ ಉದ್ದೇಶಿತ ಯೋಜನೆಯು ಕೇಂದ್ರ ಸರ್ಕಾರದ ಪರಿಸರ ಪ್ರಭಾವ ಅಧಿಸೂಚನೆಯ ಷೆಡ್ಯೂಲ್-1ರ ವ್ಯಾಪ್ತಿಯಲ್ಲಿ ಬರುತ್ತದೆ. ಈ ಯೋಜನೆಗೆ ಕೇಂದ್ರ ಸರ್ಕಾರದ ಅನುಮೋದನೆ ಅಗತ್ಯ. ಕಂಪನಿಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯಗಳಿಗೆ ಅರ್ಜಿ ಸಲ್ಲಿಸಿ ಪರಿಸರ ರಕ್ಷಣೆಗೆ ಸಂಬಂಧಿಸಿದ ಕೇಂದ್ರ ಸರ್ಕಾರದ ನಿರ್ದಿಷ್ಟ ಕಾಯ್ದೆ ಹಾಗೂ ನಿಯಮಗಳನ್ವಯ ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯತಕ್ಕದ್ದು.

***ಸ್ಥಳೀಯರಿಗೆ ಉದ್ಯೋಗ:-***

ರಾಜ್ಯ ಕೈಗಾರಿಕಾ ನೀತಿ 2001-06ರ ಕಂಡಿಕೆ 8.6ರನ್ವಯ ಘಟಕದಲ್ಲಿ ಸ್ಥಳೀಯರಿಗೆ ನಿಗದಿತ ಪ್ರಮಾಣದಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸತಕ್ಕದ್ದು.

***ಪ್ರೋತ್ಸಾಹ ಹಾಗೂ ರಿಯಾಯಿತಿ:-***

2001-06ರ ಮಾರ್ಪಡಿಸಿದ ಕೈಗಾರಿಕಾ ನೀತಿಯನುಸಾರ ಪ್ರೋತ್ಸಾಹ ಹಾಗೂ ರಿಯಾಯಿತಿಯಿನ್ನು ಪಡೆಯಲು ಘಟಕ ಅರ್ಹವಿರುತ್ತದೆ.

ಈ ಅನುಮೋದನೆಯು ಈ ಆದೇಶ ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಕಾಲ ಜಾರಿಯಲ್ಲಿರುತ್ತದೆ.

ಈ ಆದೇಶವನ್ನು ಜಲ ಸಂಪನ್ಮೂಲ ಇಲಾಖೆಯ ಅನಧಿಕೃತ ಟಿಪ್ಪಣಿ ಕ್ರಮ ಸಂಖ್ಯೆ: ಜಸಂಇ 334 ಎಂಟಿಪಿ 2004 ದಿನಾಂಕ 4-8-2005ರಲ್ಲಿ ಸೂಚಿಸಲಾದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಹಾಗೂ
ಅವರ ಹೆಸರಿನಲ್ಲಿ,

(ಎಂ. ಕಪಲಿಂಗಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪ್ರತಿಗಳು:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಮತ್ತು ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನೀರಾವರಿ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿಗಳು, ಜೈವಿಕ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಆಯವ್ಯಯ ಮತ್ತು ಸಂಪನ್ಮೂಲ). ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, (ವಾಣಿಜ್ಯ ತೆರಿಗೆ), ಆರ್ಥಿಕ ಇಲಾಖೆ
12. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕಾ ವಾಣಿಜ್ಯ ಇಲಾಖೆ, ಖನಿಜಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
13. ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಗಾಂಧಿನಗರ, ಬೆಂಗಳೂರು-9.
14. ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಹಾಗೂ ಕಾರ್ಯಕಾರಿ ಸದಸ್ಯರು, ಕೆ.ಐ.ಎ.ಡಿ.ಬಿ., ನೃಪತುಂಗ ರಸ್ತೆ,ಬೆಂಗಳೂರು.
15. ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ
16. ಅಧ್ಯಕ್ಷರು, ಕರ್ನಾಟಕ ರಾಜ್ಯ ಪರಿಸರ ನಿಯಂತ್ರಣ ಮಂಡಳಿ, ಚರ್ಚ್ ಸ್ಟ್ರೀಟ್, ಬೆಂಗಳೂರು.
17. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ ಜಿಲ್ಲೆ, ಕೊಪ್ಪಳ.
18. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.
19. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುಚ್ಛಕ್ತಿ ವಿತರಣಾ ನಿಯಮಿತ, ಗುಲ್ಬರ್ಗಾ.
20. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
21. ಮ:ಎಂಎಸ್‌ಪಿಎಲ್ ಲಿಮಿಟೆಡ್. ಎನ್.ಸಿ.ಕಾಲೋನಿ ಹೊಸಪೇಟೆ, ಬಳ್ಳಾರಿ-583 203
22. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.